## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 907 (1053) |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್ |
| ಉತ್ತರಿಸಬೇಕಾದ ದಿನಾಂಕ | : | 25.08.2026 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪೌರಾಡಳಿತ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಉಪ ನೋಂದಣಿ ಕಛೇರಿಯಲ್ಲಿ ನೋಂದಾಯಿಸುವ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಆಸ್ತಿಯಿಂದ ಸಂಗ್ರಹವಾಗುವ ಅಧಿಭಾರ ಶುಲ್ಕ (surcharge cess) ನಗರ ಸ್ಥಳೀಯ ಸಂಸ್ಥೆಗಳ ಖಾತೆಗಳಿಗೆ ಪ್ರತಿವರ್ಷ ಜಮೆ ಆಗುತ್ತಿದೆಯೇ; ಆಗುತ್ತಿದ್ದಲ್ಲಿ, ಯಾವ ಖಾತೆಗೆ ಜಮೆ ಮಾಡಲಾಗುತ್ತಿದೆ; ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳಿಗೆ ಕಳೆದ 3 ವರ್ಷಗಳಿಂದ ಅಧಿಭಾರ ಶುಲ್ಕ ಜಮೆಯಾಗಿರುವ ವಿವರ ನೀಡುವುದು; | ಉಪ ನೋಂದಣಿ ಕಛೇರಿಯಲ್ಲಿ ನೋಂದಾಯಿಸುವ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಆಸ್ತಿಯಿಂದ ಸಂಗ್ರಹವಾಗುವ ಅಧಿಭಾರ ಶುಲ್ಕ (surcharge cess) ನಗರ ಸ್ಥಳೀಯ ಸಂಸ್ಥೆಗಳ ಖಾತೆಗಳಿಗೆ ಜಮೆ ಆಗಿರುವುದಿಲ್ಲ.<br><br>ಸದರಿ ಅಧಿಭಾರ ಶುಲ್ಕವನ್ನು ಖಜಾನೆ ಇಲಾಖೆಯಲ್ಲಿರುವ ನಗರ ಸ್ಥಳಿಯ ಸಂಸ್ಥೆಗಳ ಸಾಮಾನ್ಯ ನಿಧಿ ಖಾತೆಗೆ ಜಮೆ ಮಾಡಬೇಕಾಗಿರುತ್ತದೆ.<br><br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಕಳೆದ ಮೂರು ವರ್ಷಗಳಿಂದ ಯಾವುದೇ ಅಧಿಭಾರ ಶುಲ್ಕ ಜಮೆ ಆಗಿರುವುದಿಲ್ಲ. |
| ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಯಾವ ನಗರ ಸ್ಥಳೀಯ ಸಂಸ್ಥೆಗಳಿಗೆ ಎಷ್ಟೆಷ್ಟು ಅಧಿಭಾರ ಶುಲ್ಕ ಜಮೆಯಾಗಲು ಬಾಕಿ ಇದೆ; (ವಿವರ ನೀಡುವುದು) ಸಂಗ್ರಹವಾಗಿರುವ ಅಧಿಭಾರ ಶುಲ್ಕವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಜಮೆ ಮಾಡುವವರು ಯಾರು; | ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನೋಂದಣಿ ಸಮಯದಲ್ಲಿ ಸಂಗ್ರಹಿಸುವ ಅಧಿಭಾರ ಶುಲ್ಕವನ್ನು ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ ಜಮಾ ಮಾಡಬೇಕಾಗಿರುತ್ತದೆ. ಸದರಿ ವಿಷಯದ ಬಗ್ಗೆ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರಿಗೆ ಅಧಿಭಾರ ಶುಲ್ಕವನ್ನು K2 ತಂತ್ರಾಂಶದ ಸರ್ವೀಸ್ ಫೀಜ್ ರೇವಣಿ ಖಾತೆಗೆ ಜಮಾ ಮಾಡಲು ಕೋರಿ ಪೌರಾಡಳಿತ ನಿರ್ದೇಶನಾಲಯದಿಂದ ದಿನಾಂಕ: 07.08.2026 ರಂದು ಪತ್ರ ಬರೆಯಲಾಗಿರುತ್ತದೆ. |
| ಇ) | ಗ್ರಾಮ ಪಂಚಾಯಿತಿಯಿಂದ ಮೇಲ್ದರ್ಜೆಗೇರಿದ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಶ್ರೇಣಿ-2 ವೃಂದದ ವೇತನ ತಾರತಮ್ಯ ನಿವಾರಣೆಗೆ ಕೈಗೊಂಡ ಕ್ರಮಗಳೇನು; | ಗ್ರಾಮ ಪಂಚಾಯಿತಿಯಿಂದ ಮೇಲ್ದರ್ಜೆಗೇರಿದ ಪಟ್ಟಣ ಪಂಚಾಯಿತಿಯಲ್ಲಿನ ಮುಖ್ಯಾಧಿಕಾರಿ ಶ್ರೇಣಿ-2ರ ಹುದ್ದೆಯ ವೇತನ ಶ್ರೇಣಿ ಹಾಗೂ ಹಾಲಿ ಅಸ್ತಿತ್ವದಲ್ಲಿರುವ ಪಟ್ಟಣ ಪಂಚಾಯಿತಿಯಲ್ಲಿನ ಮುಖ್ಯಾಧಿಕಾರಿ ಶ್ರೇಣಿ-2ರ ಹುದ್ದೆಯ ವೇತನ ಶ್ರೇಣಿ (ರೂ.54175- 99400) ಒಂದೇ ಆಗಿರುವುದರಿಂದ ಯಾವುದೇ ವೇತನ ತಾರತಮ್ಯ ಇರುವುದಿಲ್ಲ. |
| ಈ) | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಯಂ ಪೌರಕಾರ್ಮಿಕರಿಗೆ ಭಾಗಶಃ ವೇತನವನ್ನು ನಗರ ಸ್ಥಳೀಯ ಸಂಸ್ಥೆಗಳಿಂದಲೇ ಪಾವತಿ ಮಾಡುವಂತೆ ಆದೇಶ ಮಾಡಿರುವ ಉದ್ದೇಶ ಮತ್ತು ಕಾರಣವೇನು; ಇದರಿಂದಾಗಿ ಹೊರಗುತ್ತಿಗೆ ಸಿಬ್ಬಂದಿಗಳನ್ನು ಹೊರತುಪಡಿಸಿ, ಖಾಯಂ ಪೌರಕಾರ್ಮಿಕರಿಗೆ ಕೂಡಾ ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ನಿಧಿಯು ವೇತನಕ್ಕೆ ವಿನಿಯೋಗ ಆಗಿ ಅಭಿವೃದ್ಧಿ ಕಾರ್ಯಗಳು ಕುಂಠಿತ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಕರ್ನಾಟಕ ಪುರಸಭೆಗಳ (ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳ ಪೌರಕಾರ್ಮಿಕರ ನೇಮಕಾತಿ (ವಿಶೇಷ) ನಿಯಮಗಳು, 2022 ರಡಿಯಲ್ಲಿ ನೇಮಕಾತಿ ಹೊಂದಿರುವ ಪೌರಕಾರ್ಮಿಕರ ಭಾಗಶಃ ವೇತನವನ್ನು ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ನಿಧಿಯಿಂದ ಪಾವತಿಸಲು ಆರ್ಥಿಕ ಇಲಾಖೆಯ ದಿನಾಂಕ:17-09-2022 ರ ಅಭಿಪ್ರಾಯದಲ್ಲಿ ತಿಳಿಸಲಾಗಿರುವಂತೆ ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ನಿಧಿಯಿಂದ ಪಾವತಿ ಮಾಡಲಾಗುತ್ತಿದೆ. |

**ಸಂಖ್ಯೆ: ನಅಇ 239 ಜಿಇಎಲ್ 2026 (ಇ)**

**(ಹೆಚ್. ಸಿ. ಬಾಲಕೃಷ್ಣ)**
ಪೌರಾಡಳಿತ ಸಚಿವರು